ಶ್ರೀ ಹಂಪನಗೌಡ ಬಾದರ್ಲಿ : ಕಾಲಿಂಗ್ ಅಟೆನ್‌ಷನ್ ಅನ್ನು ಹಾಕಿದ್ದು ಇದುವರೆವಿಗೂ ತೆಗೆದುಕೊಂಡಿಲ್ಲ, ತಾವು ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಈಗ ಆರುವರೆ ಗಂಟೆಯಾಯಿತು, ಈಗ ಸಿಂಧ್ಯಾರವರು ರೈಲ್ವೆಗೆ ಸಂಬಂಧಿಸಿದಂತೆ ಮೀಟಿಂಗ್ ಕರೆದಿದ್ದಾರೆ, ಬಹಳ ಜನ ಸದಸ್ಯರು ಹೋಗಿದ್ದಾರೆ.

ಶ್ರೀ ಹಂಪನಗೌಡ ಬಾದರ್ಲಿ : ಸನ್ಮಾನ್ಯ ಅಧ್ಯಕ್ಷರೆ, ರೈತರಿಗೆ ಸಂಬಂಧಪಟ್ಟಂತಹವು 8 ಕಾಲಿಂಗ್ ಅಟೆನ್‌ಷನ್ ಇದ್ದಾವೆ. ದಯವಿಟ್ಟು ಅವಕಾಶವನ್ನು ಮಾಡಿಕೊಡಿ. ಇವತ್ತಾಗದಿದ್ದರೆ ನಾಳೆ ಕೊಡಿ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ : ಈ ಸದನ ಆರಂಭವಾದಾಗಿನಿಂದ ರೂಲ್ 69ಗಳೆಲ್ಲ ಹಾಗೆಯೇ ಇದ್ದಾವೆ.

ಅಧ್ಯಕ್ಷರು : ಈಗ ಪ್ರಕೃತಿ ವಿಕೋಪದಿಂದಾಗಿ ಯಾವರೀತಿಯಾಗಿ ತೊಂದರೆಯಾಗಿದೆ ಎನ್ನುವುದರ ಬಗ್ಗೆ ಬಹಳ ದೀರ್ಘವಾಗಿ ಎರಡು ಮೂರುದಿವಸಗಳಿಂದ ಚರ್ಚೆಯಾಗಿದೆ. ಈಗ ಅನೇಕ ಜನ ಸದಸ್ಯರುಗಳು ಅವರವರ ಕ್ಷೇತ್ರಗಳಿಗೆ ಹೋಗಬೇಕು ಅಲ್ಲೇನಾಗಿದೆ ಎಂಬುದನ್ನು ನೋಡಬೇಕೆಂದು ಉತ್ಸುಕರಾಗಿದ್ದಾರೆ. ಸರ್ಕಾರದ ಮಂತ್ರಿಗಳು ಸಹ ಅದಕ್ಕೆ ಉತ್ಸುಕರಾಗಿದ್ದಾರೆ ಆ ಕಾರಣದಿಂದ ನನಗೆ ಮನವಿಯನ್ನೂ ಕೂಡ ಸಲ್ಲಿಸಿದ್ದಾರೆ. ಆ ಕಾರಣ ಈ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 36 ನಿಮಿಷಕ್ಕೆ ಅನಿರ್ದಿಷ್ಟ ಅವಧಿಯವರೆಗೆ ಮುಂದೂಡಲ್ಪಟ್ಟಿತು.)

ಅನುಬಂಧ – I

ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ, 2005
(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ 22)

200506ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

200506ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ; ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು : ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ಅಧಿನಿಯಮ 2005 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2005–06ನೇ ಹಣಕಾಸು ವರ್ಷಕ್ಕಾಗಿ 10331575000 ರೂಪಾಯಿಗಳ ನೀಡಿಕೆ : ಅನುಸೂಚಿಯ 2ನೇ ಅಂಕರಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ 2005–06ನೇ ಭಾಗದ ಹಣಕಾಸು ವರ್ಷದಲ್ಲಿ